8 JUN 2017

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)


ಫೋನ್:08232236255

ಇಮೇಲ್:aeemdr2@rediffmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರಕಛೇರಿ,
ಗ್ರಾಮಾಂತರ ಉಪ ವಿಭಾಗ, ಮದ್ದೂರು


ಕ್ರಮಾಂಕ:ಸಕಾನಿಇಂ.(ವಿ)/ಹಿಸ/ಗ್ರಾ.ಉವಿ/ಮದ್ದೂರು/ 661-68 ದಿನಾಂಕ: 31 MAY 2017

## ವಿದ್ಯುತ್ ಜನಸಂಪರ್ಕ ಸಭಾ ನಡಾವಳಿ

ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ವೃತ್ತ ಕಛೇರಿ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ವಿಭಾಗೀಯ ಕಛೇರಿ ಮದ್ದೂರಿನಲ್ಲಿ ದಿನಾಂಕ: 23.05.2017 ರಂದು ಜರುಗಿದ ಗ್ರಾಮಾಂತರ ಉಪವಿಭಾಗದ ವಿದ್ಯುತ್ ಜನಸಂಪರ್ಕ ಸಭೆಯ ನಡಾವಳಿ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರ ವಿವರ:

| ಕ್ರಮ ಸಂಖ್ಯೆ | ಅಧಿಕಾರಿ/ಸಿಬ್ಬಂಧಿ | ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಸ್ಥಳ |
|---|---|---|---|
| 1 | ಶ್ರೀ ರವಿಶಂಕರ್ | ಅಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 2 | ಶ್ರೀ ರವಿಶಂಕರ್ | ಕಾಇಂ(ವಿ) | ವೃತ್ತ ಕಛೇರಿ, ಮಂಡ್ಯ |
| 3 | ಶ್ರೀ ನಾಗಭೂಷಣ್ | ಕಾಇಂ(ವಿ) | ಮದ್ದೂರು ವಿಭಾಗ |
| 4 | ಶ್ರೀ ಜಿ.ಯು.ಮಂಜುನಾಥ್ | ಸಕಾಇಂ(ವಿ) | ಮದ್ದೂರು ಗ್ರಾಮಾಂತರ ಉಪವಿಭಾಗ |
| 5 | ಶ್ರೀಮತಿ ಸುವರ್ಣ | ಸಇಂ(ಕಾ) | ಮದ್ದೂರು ಉಪವಿಭಾಗ--2 |
| 6 | ಶ್ರೀ ರವಿಕುಮಾರ್ | ಸಇಂ(ಕಾ) | ಒ ಅಂಡ್ ಎಂ, ಮದ್ದೂರು |
| 7 | ಶ್ರೀ ತೇಜ್ ಪ್ರಕಾಶ್ | ಕಿಇಂ(ವಿ) | ಕೆ.ಹೊನ್ನಲಗೆರೆ ಶಾಖೆ |
| 8 | ಶ್ರೀ ಶರಣಪ್ಪ | ಕಿಇಂ(ವಿ) | ಕೆಸ್ತೂರು ಶಾಖೆ |
| 9 | ಶ್ರೀ ಸಂತೋಷ್ ಎಂ | ಕಿಇಂ(ವಿ) | ಬೆಸಗರಹಳ್ಳಿ ಶಾಖೆ |
| 10 | ಶ್ರೀ ನಾಗೇಶ್ | ಕಿಇಂ(ವಿ) | ಕೊಪ್ಪ ಶಾಖೆ |

S E E (Elect) Works Circle CESC Mandya

ಸಭೆಯಲ್ಲಿ ಹಾಜರಿದ್ದ ಎಲ್ಲಾ ಗ್ರಾಹಕ[illegible]ಗಳನ್ನು ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು, ಸ್ವಾಗತಿಸಿ ಈ ಕೆಳಕಂಡ ಗ್ರಾಹಕರ ದೂರುಗಳಿಗೆ ಪ್ರತಿಕ್ರಿಯಿಸಿ ಉತ್ತರಿಸಲಾಯಿತು.

ಗ್ರಾಹಕರು –ಶ್ರೀ ಸತೀಶ್ ಕೆ.ಮಲ್ಲೀಗೆರೆ 8197364427

| ಕ್ರಮ ಸಂಖ್ಯೆ | ಗ್ರಾಹಕರ ದೂರುಗಳು | ಕೈಗೊಂಡ ಕ್ರಮಗಳು |
|---|---|---|
| 1 | ಕೆ.ಮಲ್ಲೀಗೆರೆ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ವಿದ್ಯುತ್ ಇರುವುದಿಲ್ಲ ಹಾಗೂ ಕುಡಿಯುವ ನೀರು ಸ್ಥಾವರಕ್ಕೆ ಪ್ರತ್ಯೇಕ ಪರಿವರ್ತಕ ಇರುವುದಿಲ್ಲವೆಂದು ತಿಳಿಸಿರುತ್ತಾರೆ. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಶ್ರೀ ಜಿ.ಯು.ಮಂಜುನಾಥ್ ರವರು ಮಾತನಾಡಿ ಸದರಿ ಗ್ರಾಮವು ಹಲ್ಲೇಗೆರೆ ಹಾಗೂ ಚಂದಗಾಲು ಎಂಬ 2 ಫೀಡರ್‌ಗಳ ಬಳಿಯಲ್ಲಿದ್ದು ಆಗಿಂದಾಗ್ಗೆ ಲೈನ್ ಕ್ಲಿಯರ್ ತೆಗೆದುಕೊಳ್ಳುತ್ತಿರುವುದರಿಂದ ಈ ರೀತಿಯ ಸಮಸ್ಯೆ ಆಗುತ್ತಿದೆ. 2 ಫೀಡರ್‌ಗಳಿಗೂ ಜಿ.ಒ.ಎಸ್ ಅಳವಡಿಸಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು. |
| ಗ್ರಾಹಕರು– ಶ್ರೀ ಸುರೇಶ್ ಮಲ್ಲನಾಯಕನಹಳ್ಳ 9483488555 | | |
| 2 | ಮಲ್ಲನಾಯಕನಹಳ್ಳಿ ಗ್ರಾಮದ NJY CABLE ಸುಟ್ಟಿದ್ದು ಗ್ರಾಮದಲ್ಲಿ ಕಳೆದ 15 ದಿನಗಳಿಂದ ವಿದ್ಯುತ್ ಇರುವುದಿಲ್ಲವೆಂದು ತಿಳಿಸಿ ಸರಿಪಡಿಸಲು ಕೋರಿರುತ್ತಾರೆ. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಶ್ರೀ ಜಿ.ಯು.ಮಂಜುನಾಥ್ ರವರು ಜಿವಿಪಿಆರ್ ರವರಿಗೆ ಮಾತನಾಡಿ ಶೀಘ್ರದಲ್ಲಿ ಹೊಸ ಕೇಬಲ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ತಿಳಿಸಿರುತ್ತಾರೆ. |
| ಗ್ರಾಹಕರು– ಶ್ರೀ ಸತೀಶ್ ಹುಳುಗನಹಳ್ಳ | | |
| 3 | ನಮ್ಮ ಗ್ರಾಮದಲ್ಲಿ ಎನ್‌ಜೆವೈ ಆಗಿದೆ. ಆದರೆ ಗ್ರಾಮದ ಒಂದು ಬೀದಿಯಲ್ಲಿ ನಿರಂತರ ವಿದ್ಯುತ್ ಸಂಪರ್ಕವಿದೆ ಇನ್ನೊಂದು ಬೀದಿಯಲ್ಲಿ ವಿದ್ಯುತ್ ಸಂಪರ್ಕವಿಲ್ಲ ಎಂದು ತಿಳಿಸಿರುತ್ತಾರೆ. | ಈ ಬಗ್ಗೆ ಕೆಸ್ತೂರು ಶಾಖಾಧಿಕಾರಿ ಶ್ರೀ ಶರಣಪ್ಪ ರವರು ಪ್ರತಿಕ್ರಿಯಿಸಿ ಎನ್‌ಜೆವೈ ಗ್ರಾಮದ ವ್ಯಾಪ್ತಿಯಲ್ಲಿ ಐಪಿ ಸೆಟ್‌ಇರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಹೆಚ್ಚುವರಿ ಪರಿವರ್ತಕ ಹಾಗೂ ಎವಿಲ್‌ಎಂಯು ಅಳವಡಿಸಿ ಮುಂದಿನ ದಿನಗಳಲ್ಲಿ ಸಮಸ್ಯೆ ಬಗೆಹರಿಸುವಂತೆ ಕೆಸ್ತೂರು ಶಾಖಾಧಿಕಾರಿಗೆ ತಿಳಿಸಿರುತ್ತಾರೆ. |
| ಗ್ರಾಹಕರು– ಶ್ರೀ ಮುಟ್ಟಸ್ವಾಮಿ, ಹೊಸಗಾವಿ 9880711344 | | |
| 4 | ಪಂಚಾಯತಿ ವ್ಯಾಪ್ತಿಯ ಬೀದಿ ದೀಪಗಳು ನಿರಂತರ ವಿದ್ಯುತ್ ಸಂಪರ್ಕದಿಂದ ಯಾವಾಗಲೂ ಉರಿಯುತ್ತಿರುತ್ತವೆ. ಅವುಗಳಿಗೆ ಸ್ವಿಚ್‌ಬೋರ್ಡ್ ಅಳವಡಿಸಿಕೊಡಿ ಎಂದು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಬೀದಿ ದೀಪಗಳಿಗೆ ಸ್ವಿಚ್‌ಬೋರ್ಡ್ ಅಳವಡಿಸುವುದು ಸಂಬಂಧಪಟ್ಟ ಗ್ರಾಮಪಂಚಾಯತಿಗೆ ಸಂಬಂಧಿಸಿದ್ದು, ಆದರೆ ಗ್ರಾಮಪಂಚಾಯತಿ ಕಡೆಯಿಂದ ಯಾವುದೇ ಸ್ಪಂದನೆ ಇಲ್ಲ. ಹೀಗಾಗಿ ನಾವೇ ಸದರಿ ಕಾಮಗಾರಿಯ ಬಗ್ಗೆ ಸಂಬಂಧಪಟ್ಟ ಶಾಖಾಧಿಕಾರಿಯವರ ಮೂಲಕ ಅಂದಾಜು ಪಟ್ಟಿ ತಯಾರಿಸಿ ವೈರ್ ಹಾಗೂ ಸ್ವಿಚ್‌ಬೋರ್ಡ್ ಅಳವಡಿಸಲು ಅಧೀಕ್ಷಕ ಇಂಜಿನಿಯರ್(ವಿ) ರವರ ಗಮನಕ್ಕೆ ತರುವುದಾಗಿ ತಿಳಿಸಿದರು. |

| | | |
|---|---|---|
| **ಗ್ರಾಹಕರು- ಶ್ರೀ ರಾಮಕೃಷ್ಣಯ್ಯ ಯರಗನಹಳ್ಳಿ 9741320082** | | |
| 5 | ಯರಗನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಅನೇಕ ಕಂಬಗಳ ನಡುವೆ ವೈರ್ ಜೋತು ಬಿದ್ದಿದೆ ದಯಮಾಡಿ ಸರಿಪಡಿಸಿ ಹಾಗೂ ಮಧ್ಯಂತರ ಕಂಬಗಳನ್ನು ಅಳವಡಿಸಿಕೊಡಿ ಎಂದು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಮಂಡ್ಯ ರವರು ಮಾತನಾಡಿ ಕೆಸ್ತೂರು ಶಾಖಾಧಿಕಾರಿಯವರಿಗೆ ಸದರಿ ಗ್ರಾಮದ ವ್ಯಾಪ್ತಿಯಲ್ಲಿ ವೈರ್ ಜೋತು ಬಿದ್ದಿರುವ ಕಡೆ ಮಧ್ಯಂತರ ಕಂಬಗಳನ್ನುಅಳವಡಿಸಿಕೊಡುವಂತೆ ತಿಳಿಸಿದ್ದಲ್ಲದೇ ಸಭೆಯಲ್ಲಿದ್ದ ಎಲ್ಲ ಶಾಖಾಧಿಕಾರಿಗಳಿಗೂ ಈ ತರಹದ ಸಮಸ್ಯೆಗಳನ್ನು ನೀವೇ ಪರಿಶೀಲಿಸಿ ಮಧ್ಯಂತರ ಕಂಬಗಳನ್ನುಅಳವಡಿಸಿ ಸಮಸ್ಯೆ ಪರಿಹರಿಸಲು ತಿಳಿಸಿದರು. |
| **ಗ್ರಾಹಕರು- ಶ್ರೀ ಮಟ್ಟಸ್ವಾಮಿ, ಹೊಸಗಾವಿ 9880711344** | | |
| 6 | ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಐಪಿ ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಹಣ ಪಾವತಿಸಿದ್ದು ಸಾಮಗ್ರಿಗಳನ್ನು ಕೊಡಿಸಿಕೊಡುವಂತೆ ಕೋರಿರುತ್ತಾರೆ. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸದರಿ ಕಾಮಗಾರಿಯ ಬಗ್ಗೆ ತಿಳಿಸಿ ಹೇಳುತ್ತಾ, ಜೇಷ್ಠತಾ ಆಧಾರದ ಮೂಲಕ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿದ್ದು ವಿಭಾಗೀಯ ಕಛೇರಿಯಿಂದ ಕಾರ್ಯಾದೇಶ ದೊರೆತ ನಂತರ ಕಾಮಗಾರಿ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. |
| **ಗ್ರಾಹಕರು- ಶ್ರೀಮತಿ ನಾಗರತ್ನಮ್ಮ ಕೋಂ ಗುಂಡಶೆಟ್ಟಿ, ಯರಗನಹಳ್ಳಿ** | | |
| 7 | ನಾವು ವಾಸಮಾಡುತ್ತಿರುವ ಮನೆಯ ಮೇಲೆ ಕೆಶಿಪ್ ನವರು ರಸ್ತೆ ಅಗಲೀಕರಣ ಮಾಡುವ ವೇಳೆ ವಿದ್ಯುತ್ ಲೈನ್ ಹಾದು ಹೋಗಿದ್ದು, ಮನೆಯಲ್ಲಿ ವಾಸ ಮಾಡಲು ಆಗುತ್ತಿಲ್ಲವೆಂದು ತಿಳಿಸಿ ಲೈನ್ ಸ್ಥಳಾಂತರಿಸಲು ಕೋರಿರುತ್ತಾರೆ. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸಂಬಂಧಪಟ್ಟ ಶಾಖಾಧಿಕಾರಿ ಕೆಸ್ತೂರುರವರನ್ನು ವಿಚಾರಿಸಲಾಗಿ ಶಾಖಾಧಿಕಾರಿರವರು ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಿ ಜರೂರಾಗಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿರುತ್ತಾರೆ. |
| **ಗ್ರಾಹಕರು- ಶ್ರೀ ಸತೀಶ್, ಹೆಮ್ಮನಹಳ್ಳಿ** | | |
| 8 | ಗ್ರಾಮದಲ್ಲಿ ಶುದ್ಧ ಕುಡಿಯುವ ನೀರು ಘಟಕ ಸ್ಥಾವರ ಸ್ಥಾಪನೆಯಾಗಿದ್ದು ಸದರಿ ಸ್ಥಾವರಕ್ಕೆ ಗ್ರಾಮದ ಪರಿವರ್ತಕದಿಂದ ವಿದ್ಯುತ್ ಸರಬರಾಜು ಕಲ್ಪಿಸಲಾಗಿದ್ದು ಸಮರ್ಪಕವಾದ ವಿದ್ಯುತ್ ಪೂರೈಕೆಯಾಗದೆ ಕುಡಿಯುವ ನೀರಿಗೆ ತೊಂದರೆಯಾಗಿರುವುದಾಗಿ ತಿಳಿಸಿ ಸರಿಪಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸಂಬಂಧಪಟ್ಟ ಶಾಖಾಧಿಕಾರಿ ಕೆಸ್ತೂರುರವರಿಗೆ ಡೆಡಿಕೇಟೆಡ್ ವಾಟರ್ ಸಪ್ಲೆ ಅಂದಾಜು ಪಟ್ಟಿ ತಯಾರಿಸಿ ಶುದ್ಧ ಕುಡಿಯುವ ನೀರು ಘಟಕಕ್ಕೆ ಹೊಸ ಪರಿವರ್ತಕ ಅಳವಡಿಸಲು ಜರೂರಾಗಿ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| **ಗ್ರಾಹಕರು- ಶ್ರೀ ಅಶೋಕ್, ಗೊಲ್ಲರದೊಡ್ಡಿ** | | |
| 9 | ಬೆಸಗರಹಳ್ಳಿ ಶಾಖಾ ವ್ಯಾಪ್ತಿಯ ಗೊಲ್ಲರದೊಡ್ಡಿ ಗ್ರಾಮದ ದೇವಸ್ಥಾನದ ಹತ್ತಿರವಿರುವ ಸುಮಾರು 300 ಮೀಟರ್ ಅಂತರದ ವಿದ್ಯುತ್ ವೈರು ಪದೇ ಪದೇ ತುಂಡಾಗಿ ಬೀಳುತ್ತಿದ್ದು ಸರಿಪಡಿಸಲು ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಸಂಬಂಧಪಟ್ಟ ಬೆಸಗರಹಳ್ಳಿ ಶಾಖಾಧಿಕಾರಿ ರವರಿಗೆ ಮಧ್ಯಂತರ ಕಂಬಗಳನ್ನು ಅಳವಡಿಸಿ ಜರೂರಾಗಿ ಸಮಸ್ಯೆ ಬಗೆಹರಿಸಲು ಸೂಚಿಸಿದರು. ಅಲ್ಲದೇ ವೈರ್ ತುಂಡಾಗಿ ಬೀಳುತ್ತಿರುವುದರಿಂದ ವೈರ್ ತನ್ನ ಸಾಮರ್ಥ್ಯವನ್ನು ಕಳೆದುಕೊಂಡಿದ್ದರೆ ಹೊಸ |

| | | |
|---|---|---|
| | | ವೈರ್ ಅಳವಡಿಸಲು ಸೂಚಿಸಿದರು. |
| **ಗ್ರಾಹಕರು- ಶ್ರೀ ಶಿವರಾಜು, ಶಿವನಂಜಪ್ಪ, ತೈಲೂರು** | | |
| 10 | ನಮ್ಮ ಗ್ರಾಮದಲ್ಲಿ ಎನ್‌ಜೆವೈ ಆಗಿದೆ. ಆದರೆ ಗ್ರಾಮದಲ್ಲಿ ಸರಿಯಾದ ವಿದ್ಯುತ್ ಸರಬರಾಜು ಇಲ್ಲ ಎಂದು ತಿಳಿಸಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಕೆ.ಹೊನ್ನಲಗೆರೆ ಶಾಖಾಧಿಕಾರಿ ಶ್ರೀ ತೇಜ್ ಪ್ರಕಾಶ್‌ರವರನ್ನು ವಿಚಾರಿಸಲಾಗಿ ಎನ್‌ಜೆವೈ ಕೇಬಲ್ ಅಲ್ಲಲ್ಲಿ ಸುಟ್ಟಿರುವುದಾಗಿ ತಿಳಿಸಿದರು. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಜೆವಿಪಿಆರ್‌ರವರಿಗೆ ತಿಳಿಸಿ ಹೊಸ ಕೇಬಲ್ ಅಳವಡಿಸಿ ಜರೂರಾಗಿ ಸಮಸ್ಯೆ ಬಗೆಹರಿಸುವಂತೆ ಶಾಖಾಧಿಕಾರಿಗೆ ಸೂಚಿಸಿರುತ್ತಾರೆ. |
| **ಗ್ರಾಹಕರು- ಶ್ರೀ ತಿಮ್ಮೇಗೌಡ, ಹಬ್ಬರಳು** | | |
| 11 | ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಐಪಿ ಸೆಟ್‌ಗೆ ವಿದ್ಯುತ್ ಸಂಪರ್ಕ ಪಡೆಯಲು ಹಣ ಪಾವತಿಸಿದ್ದು ಸಾಮಗ್ರಿಗಳನ್ನು ಕೊಡಿಸಿಕೊಡುವಂತೆ ಕೋರಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸದರಿ ಕಾಮಗಾರಿಯ ಬಗ್ಗೆ ತಿಳಿಸಿ ಹೇಳುತ್ತಾ, ಜೇಷ್ಠತಾ ಆಧಾರದ ಮೂಲಕ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿರುವುದಾಗಿ ತಿಳಿಸಿದರು ಅಲ್ಲದೇ ಸದರಿ ಗ್ರಾಹಕರಿಗೆ ಪರಿವರ್ತಕ ಮಂಜೂರಾಗಿದ್ದು ಅಳವಡಿಸಲಾಗಿದೆ. ಕೇವಲ ಎಲ್‌ಟಿ ಲೈನ್‌ಗೆ ಅಂದಾಜು ಪಟ್ಟಿ ಸಲ್ಲಿಸಿದ್ದು ಮುಂದಿನ ದಿನಗಳಲ್ಲಿ ಮಂಜೂರು ಮಾಡುವುದಾಗಿ ತಿಳಿಸಿದರು |
| **ಗ್ರಾಹಕರು- ಶ್ರೀ ಶಿವನಂಜಪ್ಪ, ಆಲೂರು 8453274418** | | |
| 12 | ಗ್ರಾಮದಲ್ಲಿರುವ ಕಬ್ಬಿಣದ ಕಂಬಗಳನ್ನು ಬದಲಾಯಿಸಿ ಹೊಸ ಕಂಬಗಳನ್ನು ಅಳವಡಿಸಲು ಕೋರಿರುತ್ತಾರೆ. | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ಈಗಾಗಲೇ ವಿಭಾಗೀಯ ಕಛೇರಿಗೆ ಸಲ್ಲಿಸಿರುವುದಾಗಿ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸದರಿ ಕಾಮಗಾರಿಯ ಬಗ್ಗೆ ತಿಳಿಸಿ ಹೇಳುತ್ತಾ, ಸದರಿ ಕಾಮಗಾರಿಯು ಪ್ರೇಮ ಎಲೆಕ್ಟ್ರಿಕಲ್ಸ್‌ನವರಿಗೆ 59 ಲಕ್ಷಕ್ಕೆ ಟೆಂಡರ್ ಆಗಿದ್ದು ಮುಂದಿನ ದಿನಗಳಲ್ಲಿ ಕಾಮಗಾರಿ ಪ್ರಾರಂಭವಾಗುವುದಾಗಿ ತಿಳಿಸಿದರು. |
| **ಗ್ರಾಹಕರು- ಶ್ರೀ ಮಟ್ಟಸ್ವಾಮಿ, ಹೊಸಗಾವಿ 9880711344** | | |
| 13 | ಕೊಪ್ಪ ಶಾಖೆಗೆ ಅನುಭವಿ ಲೈನ್‌ಮನ್‌ಗಳನ್ನು ಕೊಡಿ. ಸದರಿ ಶಾಖೆಯು ದಿನೇ ದಿನೇ ತುಂಬಾ ದೊಡ್ಡದಾಗಿ ಬೆಳೆಯುತ್ತಿದ್ದು, ಹೊಸದಾಗಿ ಬಂದಿರುವ ಲೈನ್‌ಮನ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇರುವ ಹಳೆಯ ಲೈನ್‌ಮನ್‌ಗಳಲ್ಲಿ ಕೆಲಸ ಮಾಡುವ | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಮುಂದಿನ ದಿನಗಳಲ್ಲಿ ಅನುಭವಿ ಲೈನ್‌ಮನ್‌ಗಳನ್ನು ಕೊಪ್ಪ ಶಾಖೆಗೆ ಕೊಡುವುದಾಗಿ ತಿಳಿಸಿದ್ದಲ್ಲದೇ, ಹೊಸದಾಗಿ ಬಂದಿರುವ ಲೈನ್‌ಮನ್‌ಗಳನ್ನು ಆದಷ್ಟು ಕೆಲಸಕ್ಕೆ ಬಳಸಿಕೊಂಡು ವಿದ್ಯುತ್ |

| | | |
|---|---|---|
| | ಚೈತನ್ಯವೇ ಇಲ್ಲ ಎಂದು ತಿಳಿಸಿದರು. | ಸಮಸ್ಯೆಗಳನ್ನು ಪರಿಹರಿಸಲು ಕೊಪ್ಪ ಶಾಖಾಧಿಕಾರಿಗೆ ತಿಳಿಸಿದರು. |
| | **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | |
| 14 | ನಮ್ಮ ಸುತ್ತ-ಮುತ್ತಲಿನ ಗ್ರಾಮದಲ್ಲಿ ತುಂಬಾ ಹಳೆಯದಾದ ಕಬ್ಬಿಣದ ಕಂಬ ಹಾಗೂ ಸಿಮೆಂಟ್ ಕಂಬಗಳಿವೆ. ಇವುಗಳನ್ನು ತೆಗೆದು ಹೊಸ ಕಂಬಗಳನ್ನು ಅಳವಡಿಸುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಇಂತಹ ಕಾಮಗಾರಿಗಳನ್ನು ನಿರ್ವಹಿಸಲು ಡಿಡಿಯುಜಿಜೆವೈ ಎಂಬ ಹೊಸ ಯೋಜನೆಯಿದ್ದು, ಸದರಿ ಯೋಜನೆಯಡಿ ಮುಂದಿನ ದಿವಗಳಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಿ ಹಳೆಯ ಕಂಬಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| | **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | |
| 15 | ರೈತರು ಮನೆ ಮಾಡುವಾಗ ಮನೆಯ ಮೇಲೆ ಹಾದು ಹೋಗಿರುವ ವಿದ್ಯುತ್ ಲೈನ್ ಸ್ಥಳಾಂತರಿಸಿಕೊಡುವಂತೆ ಕೋರಿದರು. | ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಇಂಜಿನಿಯರ್(ವಿ) ವೃತ್ತ ಕಛೇರಿ, ಮಂಡ್ಯರವರು ಮಾತನಾಡಿ ಯಾವುದೇ ವಿದ್ಯುತ್ ಲೈನ್/ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿಯನ್ನು ಸ್ವಯಂ ನಿರ್ವಹಣಾ ಯೋಜನೆಯಡಿ ಗ್ರಾಹಕರು ಸ್ವಂತ ಖರ್ಚಿನಲ್ಲಿಯೇ ನಿರ್ವಹಿಸಿಕೊಳ್ಳಬೇಕೆಂದು ತಿಳಿಸಿದರು. ಮುಂದುವರೆದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಎಸ್‌ಸಿಪಿ ಯೋಜನೆಯಡಿಯೂ ಗ್ರಾಹಕರು ವಿದ್ಯುತ್ ಲೈನ್/ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿ ನಿರ್ವಹಿಸಿಕೊಳ್ಳಬಹುದೆಂದು ತಿಳಿಸಿದರು. |
| | **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | |
| 16 | ಕೊಪ್ಪ ಶಾಖಾ ವ್ಯಾಪ್ತಿಯ ಎನ್‌ಎಸ್‌ಎಲ್ ಶುಗರ್ ಕಾರ್ಖಾನೆಯ ಬಳಿ ಇರುವ ಮನೆಗೆ ಎನ್‌ಜೆವೈ ಲೈನ್‌ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಿ. ಇಲ್ಲವಾದರೆ ಎನ್‌ಎಸ್‌ಎಲ್ ಶುಗರ್ ಕಾರ್ಖಾನೆಯಿಂದಾದರೂ ಕೊಡಿಸಿ ಕೊಡಿ ಎಂದು ತಿಳಿಸಿದರು. | ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಇಂಜಿನಿಯರ್(ವಿ) ವೃತ್ತ ಕಛೇರಿ, ಮಂಡ್ಯರವರು ಮಾತನಾಡಿ ಗ್ರಾಮದ ಪರಿಮಿತಿಯಲ್ಲಿದ್ದರೆ ಎನ್‌ಜೆವೈನಿಂದ ವಿದ್ಯುತ್ ಸಂಪರ್ಕ ಕಲ್ಪಿಸಬಹುದು. ಅಲ್ಲದೇ ಗ್ರಾಮದ ಹೊರಗಡೆ ಇದ್ದರೆ ಎಬಿ ಕೇಬಲ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಬಹುದು. ಮುಂದುವರೆದು ಆರ್‌ಎಲ್‌ಎಂಎಸ್ ಅಳವಡಿಸಿ ಸಮಸ್ಯೆ ಬಗೆಹರಿಸಬಹುದು ಎಂದು ತಿಳಿಸುತ್ತಾ ಶಾಖಾಧಿಕಾರಿ ಕೊಪ್ಪ ರವರಿಗೆ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು. |
| | **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | |
| 17 | ಗ್ರಾಮದ ಹೊರಗಡೆ ಇರುವ ಒಂಟಿ ಮನೆಗಳಿಗೆ ಸೋಲಾರ್ ಅಳವಡಿಸಿಕೊಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಗುಡ್ಡಗಾಡು ಪ್ರದೇಶಗಳ ಮನೆಗಳಿಗೆ ಹಾಗೂ ಸ್ವತಂತ್ರ ಪೂರ್ವದಿಂದ |

| | | |
|---|---|---|
| | | ಇಲ್ಲಿಯವರೆವಿಗೂ ವಿದ್ಯುತ್ ಸಂಪರ್ಕವಿಲ್ಲದ ಮನೆಗಳಿಗೆ ಸೋಲಾರ್ ಅಳವಡಿಸುವ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಈ ಭಾಗಕ್ಕೆ ಅದು ಅನ್ವಯಿಸುವುದಿಲ್ಲವೆಂದು ತಿಳಿಸಿದರು. |
| **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | | |
| 18 | ಐಪಿ ಸೆಟ್‌ಗಳಿಗೆ ಸೋಲಾರ್ ಅಳವಡಿಕೆಯ ಬಗ್ಗೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಪರಿಶಿಷ್ಟಜಾತಿ /ಪರಿಶಿಷ್ಟಪಂಗಡ ದವರಿಗೆ ಅರ್ಜಿ ಶುಲ್ಕ ರೂ 50/- ಹಾಗೂ ಇತರೆ ಪಂಗಡದವರು ರೂ 1 ಲಕ್ಷ ಡಿಡಿ ಪಾವತಿಸಿ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಬಹುದೆಂದು ತಿಳಿಸಿದರು. |
| **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | | |
| 19 | ಕುಡಿಯುವ ನೀರು ಸ್ಥಾವರಗಳು ಸುಟ್ಟು ಹೋದಾಗ ಜರೂರಾಗಿ ಅಳವಡಿಸುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಭೆಯಲ್ಲಿದ್ದ ಎಲ್ಲಾ ಸಹಾಯಕ ಇಂಜಿನಿಯರ್/ಶಾಖಾಧಿಕಾರಿಗಳಿಗೆ ಈ ಬಗ್ಗೆ ಎಚ್ಚರಿಕೆ ವಹಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | | |
| 20 | ಕೆಇಆರ್‌ಸಿ ರವರು ವಿದ್ಯುತ್ ದರ ನಿಗದಿ ಮಾಡುವ ವಿಚಾರವಾಗಿ ಜನಸಂಪರ್ಕ ಸಭೆಯಲ್ಲಿ ಚರ್ಚೆ ಮಾಡಲು ತಿಳಿಸುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಕೆಇಆರ್‌ಸಿ ಸಭೆಗಳು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ನಡೆಯುವುದು ಹಾಗೂ ಸಭೆಯಲ್ಲಿ ಕೈಗಾರಿಕೆಗೆ ಸಂಬಂಧಪಟ್ಟಂತೆ ಒಬ್ಬರು, ವಾಣಿಜ್ಯ ಮಟ್ಟದ ಅಧಿಕಾರಿಯೊಬ್ಬರು ಹಾಗೂ ಜನ ಸಾಮಾನ್ಯರ ಮುಖಂಡರೊಬ್ಬರು ಭಾಗವಹಿಸಿರುತ್ತಾರೆಂದು ತಿಳಿಸಿದರು. ಅಲ್ಲದೇ ಮುಂದುವರೆದು ಮಾಧ್ಯಮದ ಮೂಲಕ ನೀವೂ ಭಾಗವಹಿಸ ಬಹುದು ಎಂದು ತಿಳಿಸಿದರು. ಹಾಗೂ ಮುಂದಿನ ದಿನಗಳಲ್ಲಿ ಕೆಇಆರ್‌ಸಿಗೆ ಸಂಬಂಧಪಟ್ಟ ವಿಚಾರಗಳನ್ನು ಜನಸಂಪರ್ಕ ಸಭೆಯಲ್ಲಿ ಚರ್ಚಿಸಲು ಅನುಮತಿ ನೀಡುವಂತೆ ಮೇಲಾಧಿಕಾರಿಗಳಿಗೆ ಪತ್ರ ಬರೆಯುವುದಾಗಿ ತಿಳಿಸಿದರು. |
| **ಗ್ರಾಹಕರು- ಶ್ರೀ ನರಸರಾಜು, ಕೋಣಸಾಲೆ** | | |
| 21 | ಡಿಸ್‌ಪ್ಯೂಟ್ ಗ್ರಾಮಗಳ ವಿದ್ಯುತ್ ಸಮಸ್ಯೆ ಬಗ್ಗೆ ರೈತ ಮುಖಂಡರಾದ ನಾವು ಮಾನ್ಯ ಇಂಧನ ಸಚಿವರ ಬಳಿ ಮಾತನಾಡಿದ್ದು, ವಿದ್ಯುತ್ ಸ್ಥಾವರಗಳ ಕಂದಾಯ ಬಾಕಿಯನ್ನು ಪೂರ್ಣ ಮನ್ನಾ ಮಾಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಈ ತರಹದ ಅಧಿಕಾರ ನಮಗಿಲ್ಲ. ಕೆಇಆರ್‌ಸಿರವರಿಗೆ ಪತ್ರ ಬರೆಯುವುದಾಗಿ ತಿಳಿಸಿದರು. ಮುಂದುವರೆದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ತಿಂಗಳ ಬಿಲ್‌ನಾದರೂ |

| | | |
|---|---|---|
| | | ನೀವುಗಳು ಕಟ್ಟಬೇಕೆಂದು ತಿಳಿಸಿದರು ಅಲ್ಲದೇ ಇದೇ ತರ ಇನ್ನು ಮುಂದೆ ವಿದ್ಯುತ್ ಬಾಕಿ ಉಳಿದರೆ ನಿಮ್ಮ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲು ತುಂಬಾ ತೊಂದರೆಯಾಗುವುದಾಗಿ ತಿಳಿಸಿದರು. |
| **ಗ್ರಾಹಕರು– ಶ್ರೀ ನರಸರಾಜು, ಕೋಣಸಾಲೆ** | | |
| 22 | ಎಲ್‌ಇಡಿ ಬಲ್ಬ್‌ಗಳ ಬಗ್ಗೆ ವಿಚಾರಿಸಿ ಕೆಟ್ಟು ಹೋಗಿರುವ ಎಲ್‌ಇಡಿ ಬಲ್ಬ್‌ಗಳ ಬದಲಾವಣೆ ಯಾವರೀತಿ ಎಂದು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ದಿನಗಳಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| **ಗ್ರಾಹಕರು– ಶ್ರೀ ಆನಂದ್, ಸಾದೊಳಲು ಗ್ರಾಮ** | | |
| 23 | ಗ್ರಾಮದ ಪರಿವರ್ತಕದಿಂದ ನಮ್ಮ ಕಂಪ್ಯೂಟರ್ ಸೆಂಟರ್‌ಗೆ ಸರಿಯಾದ ವಿದ್ಯುತ್ ಸರಬರಾಜು ಆಗುತ್ತಿಲ್ಲವೆಂದು ತಿಳಿಸಿ ಸರಿಪಡಿಸಲು ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ರವಿ ರವರನ್ನು ವಿಚಾರಿಸಲಾಗಿ ಪರಿವರ್ತಕವನ್ನು ಬದಲಾಯಿಸಿ ಸಮಸ್ಯೆ ಬಗೆಹರಿಸಿರುವುದಾಗಿ ತಿಳಿಸಿದರು. |
| **ಗ್ರಾಹಕರು– ಶ್ರೀ ಅಸ್ಲಾಂಖಾನ್, ಮದ್ದೂರು ಟೌನ್ 9060589766** | | |
| 24 | ರಾಮ್ ರಹೀಂ ನಗರ, ಚನ್ನೇಗೌಡ ಬಡಾವಣೆಗಳಲ್ಲಿ ರಾತ್ರಿಯ ವೇಳೆ ಲೈನ್ ಸಿಂಗಲ್ ಆಗುವುದಲ್ಲದೆ ಲೋ ವೋಲ್ಟೇಜ್ ಸಮಸ್ಯೆ ಆಗುತ್ತಿರುವುದಾಗಿ ತಿಳಿಸಿದರು. ಅಲ್ಲದೇ ನಗರದ ಉರ್ದು ಸ್ಕೂಲ್ ಪಕ್ಕ ಲೈನ್ ಜೋತು ಬಿದ್ದಿರುವುದಲ್ಲದೇ ಅನೇಕ ಕಂಬಗಳು ಶಿಥಿಲಾವಸ್ಥೆಯಲ್ಲಿದ್ದು ಬದಲಾಯಿಸಲು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಇಂತಹ ಸಮಸ್ಯೆಗಳನ್ನು ಬಗೆಹರಿಸಲು ಐಪಿಡಿಎಸ್ ಎಂಬ ಹೊಸ ಯೋಜನೆಯೊಂದಿದ್ದು ಸದರಿ ಯೋಜನೆಯ ಮೂಲಕ ಅಂದಾಜು ಪಟ್ಟಿ ತಯಾರಿಸಿ ಸಮಸ್ಯೆಯನ್ನ ಬಗೆಹರಿಸಲು ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| **ಗ್ರಾಹಕರು– ಶ್ರೀ ಅಭಿನಂದನ್ ಆರ್.ವಿ. ವಳಗೆರೆಹಳ್ಳಿ 9986552222** | | |
| 25 | ತುರ್ತುಕಾಮಗಾರಿ ಅಂದಾಜು ಪಟ್ಟಿಗಳೂ ಕೂಡ ತುಂಬಾ ತಡವಾಗಿ ಮಂಜೂರಾಗುತ್ತಿದ್ದು ಇದಕ್ಕೆ ಕಾರಣವೇನೆಂದು ಕೇಳಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಜೇಷ್ಠತಾ ಆಧಾರದ ಮೇಲೆ ಪರಿವರ್ತಕಗಳನ್ನು ತುರ್ತುಕಾಮಗಾರಿ ಯೋಜನೆಯಡಿ ಮಂಜೂರಾತಿ ಮಾಡುತ್ತಿರುವುದು ಸರಿಯಷ್ಟೆ. ಅದೂಅಲ್ಲದೆ ಕಳೆದ 5/6 ತಿಂಗಳಿನಿಂದ ಈಚೆಗೆ ಸುಮಾರು 5 ಸಾವಿರಕ್ಕೂ ಹೆಚ್ಚು ಬೋರ್‌ವೆಲ್‌ಗಳನ್ನು ರೈತರು ಕೊರೆಸಿದ್ದು ಬೇಡಿಕೆಗೆ ತಕ್ಕಂತೆ ಸಾಮಗ್ರಿಗಳನ್ನು ಸರಬರಾಜು ಮಾಡಲು ತೊಂದರೆಯಾಗುತ್ತಿದೆ. ಮುಂದುವರೆದು ನಮಗೆ 62 ಸಂಖ್ಯೆ ಪರಿವರ್ತಕಗಳು ಬೇಡಿಕೆ ಇದ್ದರೂ ಸರಬರಾಜು ಆಗಿದ್ದು ಕೇವಲ 20 ಸಂಖ್ಯೆ. ಹೀಗಾಗಿ ಇಂತಹ ಹಲವಾರು ಕಾರಣಗಳಿಂದ ಮಂಜೂರಾತಿ ತಡವಾಗಿರಬಹುದು ಎಂದು ತಿಳಿಸಿದರು. ಹಾಗೂ ಪೂರಕ ದಾಖಲಾತಿಗಳು ಅಂದರೆ ಸಂಬಂಧಪಟ್ಟ ಜಮೀನಿನ ಆರ್‌ಟಿಸಿ. ಗ್ರಾಮ ಲೆಕ್ಕಾಧಿಕಾರಿರವರ ವರದಿ, ಅಂದಾಜು ಪಟ್ಟಿ ಹೀಗೆ |

| | | |
|---|---|---|
| | | ದಾಖಲಾತಿಗಳನ್ನು ಪರಿಶೀಲಿಸಿ ನಿಗಮದ ನಿಯಮಮಾನುಸಾರ ಮಂಜೂರಾತಿ ಮಾಡಲಾಗುವುದೆಂದು ತಿಳಿಸಿದರು. |
| | **ಗ್ರಾಹಕರು- ಶ್ರೀ ರವೀಂದ್ರ, ಟೀಚರ್ಸ್ ಕಾಲೋನಿ, 9986552222** | |
| 26 | ಸದರಿ ಗ್ರಾಹಕರು ಮದ್ದೂರು ಪಟ್ಟಣದ ಟೀಚರ್ಸ್ ಕಾಲೋನಿಯಲ್ಲಿ ಮನೆ ನಿರ್ಮಾಣ ಮಾಡಲು 2012ರಲ್ಲಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು, ಸ್ಥಾವರದ ಬಿಲ್‌ನಲ್ಲಾಗಿರುವ ವ್ಯತ್ಯಾಸವನ್ನು ಸರಿಪಡಿಸಿ ಕೇವಲ ಹಣವನ್ನು ಹೊಸ ಆರ್‌ಆರ್ ಸಂಖ್ಯೆಗೆ ಹೊಂದಾಣಿಕೆ ಮಾಡಿಕೊಡುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ನಗರ ಉಪವಿಭಾಗದ ಕಿರಿಯ ಸಹಾಯಕ ಶ್ರೀ: ಮಹೇಶ್‌ರವರನ್ನು ವಿಚಾರಿಸಲಾಗಿ ಸದರಿ ಆರ್‌ಆರ್ ಸಂಖ್ಯೆಯ ಕಡತವನ್ನು ಪರಿಶೀಲಿಸಿ 3 ದಿನದಲ್ಲಿ ಬಿಲ್ ಸರಿಪಡಿಸುವುದಾಗಿ ತಿಳಿಸಿದರು. |
| | **ಗ್ರಾಹಕರು- ಶ್ರೀ ಶ್ರೀನಿವಾಸ್, ನಿಡಘಟ್ಟ 9844413123** | |
| 27 | ಕಳೆದ 3 ತಿಂಗಳ ಹಿಂದೆ ನಮ್ಮ ಗ್ರಾಮ ವ್ಯಾಪ್ತಿಯಲ್ಲಿ ಪರಿವರ್ತಕ ಮಂಜೂರಾಗಿ ಅಳವಡಿಸಲಾಗಿತ್ತು. ಆದರ ಸದರಿ ಪರಿವರ್ತಕಕ್ಕೆ ವಿದ್ಯುತ್ ಸಂಪರ್ಕ ನೀಡಲು ಸಂಬಂಧಪಟ್ಟ ಕಿರಿಯ/ಸಹಾಯಕ ಇಂಜಿನಿಯರ್(ವಿ) ರವರು ಮೀನಾಮೇಷ ಎಣಿಸಿದರು. ಹೀಗಾಗಿ ಕೊನೆಗೆ ಪರಿವರ್ತಕವೇ ಕಳ್ಳತನವಾಯಿತು. ಇದರ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರು ಕೂಡ ದಾಖಲಿಸಲಾಗಿದೆ ಎಂದು ತಿಳಿಸಿದರು. ಅಲ್ಲದೇ ಫಾರಂ ಹೌಸ್ ಬಳಿ ಇರುವ ಜಿಒಎಸ್‌ನ್ನು ಸ್ಥಳಾಂತರ ಮಾಡಿಕೊಡಲು ಕೋರಿದುರ. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ನಿಗಮದ ನಿಯಮಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು. ಮುಂದುವರೆದು ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಸಹಾಯಕ ಇಂಜಿನಿಯರ್(ವಿ) ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ ನಿಗಮದ ನಿಯಮಮಾನುಸಾರ ಅಂದಾಜು ಪಟ್ಟಿ ತಯಾರಿಸಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿದರು. |
| | **ಗ್ರಾಹಕರು- ಶ್ರೀ ಗಿರೀಶ್, ತಿಪ್ಪೂರು** | |
| 28 | ತಿಪ್ಪೂರು ಗ್ರಾಮದಲ್ಲಿ ಕೋಳಿ ಸಾಕಾಣಿಕೆ ಘಟಕಕ್ಕೆ ವಿದ್ಯುತ್ ಸರಬರಾಜು ಪಡೆಯಲು ಅರ್ಜಿ ಸಲ್ಲಿಸಿ ಸುಮಾರು ತಿಂಗಳುಗಳೇ ಕಳೆದಿದೆ. ಆದರೆ ವಿದ್ಯುತ್ ಗುತ್ತಿಗೆದಾರರಾದ ಶ್ರೀ ಎಸ್‌ಎಲ್‌ಎಸ್ ಕೃಷ್ಣ ರವರು ಉಗ್ರಾಣದಲ್ಲಿ ವಿದ್ಯುತ್ ಕಂಬ, ವೈರ್ ಇಲ್ಲವೆಂದು ಹೇಳಿ ಇದುವರೆವಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲವೆಂದು ಹೇಳಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಉಗ್ರಾಣದಲ್ಲಿ ಲಭ್ಯವಿರುವ ಸಾಮಗ್ರಿಗಳನ್ನು ಪಡೆದು ಜರೂರಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡುವಂತೆ ವಿದ್ಯುತ್ ಗುತ್ತಿಗೆದಾರರಾದ ಶ್ರೀ ಎಸ್‌ಎಲ್‌ಎಸ್ ಕೃಷ್ಣ ರವರಿಗೆ ಸೂಚಿಸಿದರು. |
| | **ಗ್ರಾಹಕರು- ಗೆಜ್ಜಲಗೆರೆ ಗ್ರಾಮ** | |
| 29 | ಗೆಜ್ಜಲಗೆರೆ ಗ್ರಾಮ ವ್ಯಾಪ್ತಿಯಲ್ಲಿ ಶಾಖಾ ಕಚೇರಿ ತೆರೆದಿರುವುದಾಗಿ ತಿಳಿದಿದೆ. ಆದರೆ ಸದರಿ ಶಾಖಾ ಕಚೇರಿಗೆ ಶಾಖಾಧಿಕಾರಿ/ಲೈನ್‌ಮನ್‌ಗಳು ಇಲ್ಲವೆಂದು ಕೇಳಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ರವರು ಮಾತನಾಡಿ ಮುಂದಿನ ದಿನಗಳಲ್ಲಿ ಶಾಖಾ ಕಛೇರಿ ತೆರೆದು ಅಧಿಕೃತವಾಗಿ ಕಾರ್ಯ ನಿರ್ವಹಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| | **ಗ್ರಾಹಕರು- ಎಂ.ನೀಲಕಂಠಯ್ಯ, ಉಪ್ಪಿನಕೆರೆ ಗ್ರಾಮ 9242233305** | |
| 30 | ಗ್ರಾಮದ ವ್ಯಾಪ್ತಿಯಲ್ಲಿ ಐಪಿ ಹಾಗೂ ಗ್ರಾಮದ ಪರಿವರ್ತಕ ಒಂದೇ ಕಡೆ ಇದೆ. ಲೈನ್ | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ |

| | | |
|---|---|---|
| | ಸಿಂಗಲ್ ಆದರೆ ಯಾವುದೇ ಲೈನ್‌ಮನ್ ಕರೆದರೂ ಬರಲ್ಲ. ನಮ್ಮ ಶಾಖಾಧಿಕಾರಿ/ಕಿರಿಯ ಇಂಜಿನಿಯರ್(ವಿ) ರವರಿಗೆ ತಿಳಿಸಿ ಎನ್ನುತ್ತಾರೆ. ಅಲ್ಲದೇ ಫೋನ್ ಮಾಡಿದರೂ ಸ್ಪಂದಿಸುವುದಿಲ್ಲ ಎಂದು ಕೇಳಿದರೆ ಫೋನ್ ಇರುವುದು ನಿಮಗಲ್ಲ, ಅದು ನಮ್ಮಿಷ್ಟ ಎಂದು ಬೇಜವಾಬ್ದಾರಿ ಉತ್ತರ ಹೇಳುತ್ತಾರೆ. | ಶಾಖಾಧಿಕಾರಿ/ಕಿರಿಯ ಇಂಜಿನಿಯರ್(ವಿ) ರವರಿಗೆ ಸೂಚಿಸಿ ಅಧಿಕಾರಿಗಳು/ಲೈನ್‌ಮನಗಳು ಜನ ಸ್ನೇಹಿಯಾಗಿ ಕರ್ತವ್ಯ ನಿರ್ವಹಿಸುವಂತೆ ತಿಳಿಸಿದರು. |
| **ಗ್ರಾಹಕರು- ಎಂ.ನೀಲಕಂಠಯ್ಯ, ಉಪ್ಪಿನಕೆರೆ ಗ್ರಾಮ 9242233305** | | |
| 31 | ಗ್ರಾಮದ ಕುಡಿಯುವ ನೀರು ಸ್ಥಾವರಕ್ಕೆ ಪ್ರತ್ಯೇಕ ಪರಿವರ್ತಕ ಅಳವಡಿಸಲು ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಶಾಖಾಧಿಕಾರಿ/ಕಿರಿಯ ಇಂಜಿನಿಯರ್(ವಿ) ರವರಿಗೆ ಸೂಚಿಸಿ ಅಂದಾಜು ಪಟ್ಟಿ ತಯಾರಿಸಿ ಪ್ರತ್ಯೇಕ ಪರಿವರ್ತಕ ಅಳವಡಿಸಲು ಸೂಚಿಸಿದರು. |
| **ಗ್ರಾಹಕರು- ನ ಅ ಕೃಷ್ಣ, ನಗರಕೆರೆ ಗ್ರಾಮ 9242834721** | | |
| 32 | ಜನಸಂಪರ್ಕ ಸಭೆಗಳನ್ನು ಕಛೇರಿಯ ಒಳಗೆ ನಡೆಸುವ ಬದಲು ಹೊರಾಂಗಣದಲ್ಲಿ/ಕಛೇರಿಯ ಹೊರ ಆವರಣದಲ್ಲಿ ನಡೆಸುವಂತೆ ಕೋರಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ಜನಸಂಪರ್ಕ ಸಭೆಗಳನ್ನು ಹೊರಾಂಗಣದಲ್ಲಿ/ಕಛೇರಿಯ ಹೊರ ಆವರಣದಲ್ಲಿ ನಡೆಸುವಂತೆ ತಿಳಿಸಿದರು. |
| **ಗ್ರಾಹಕರು- ನ ಅ ಕೃಷ್ಣ, ನಗರಕೆರೆ ಗ್ರಾಮ 9242834721** | | |
| 33 | ನಿಮ್ಮ ಕಛೇರಿಯ ಬಳಿ ಅಧಿಕಾರಿಗಳ ಮೊಬೈಲ್ ಸಂಖ್ಯೆಯುಳ್ಳ ಫಲಕವನ್ನು ಅಳವಡಿಸಿ ಗ್ರಾಹಕರಿಗೆ ಮೊಬೈಲ್ ನಂಬರ್ ತಿಳಿಯುವಂತ ಸಹಕರಿಸಿ ಎಂದರು. | ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಕಚೇರಿಬಳಿ ಮೊಬೈಲ್ ಸಂಖ್ಯೆಯುಳ್ಳ ಫಲಕವನ್ನು ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| **ಗ್ರಾಹಕರು- ನ ಅ ಕೃಷ್ಣ, ನಗರಕೆರೆ ಗ್ರಾಮ 9242834721** | | |
| 34 | ನಿಮ್ಮ ಕಚೇರಿಯಲ್ಲಿಟ್ಟಿರುವ ದೂರುಗಳನ್ನು ದಾಖಲಿಸುವ ಪುಸ್ತಕ ನಿಗಧಿತ ನಮೂನೆಯಲ್ಲಿರುವುದಿಲ್ಲ. ಕೆಲವೊಮ್ಮೆ ರೈತರುಗಳು ಬಂದಾಗ ದೂರು ದಾಖಲಿಸಲು ತುಂಬಾ ಕಷ್ಟವಾಗುವುದಾಗಿ ತಿಳಿಸಿರುತ್ತಾರೆ. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ದಿನಗಳಲ್ಲಿ ನಿಗಮ ಕಚೇರಿಯಲ್ಲಿರುವಂತಹ ನಮೂನೆಯುಳ್ಳ ದೂರು ಪುಸ್ತಕವನ್ನು ಕಚೇರಿಯಲ್ಲಿಡಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಹಾಗೂ ದೂರವಾಣಿ ಸಂಖ್ಯೆ 1912ಗೆ ಕರೆಮಾಡಿ ವಿದ್ಯುತ್ ಸಂಬಂಧಿತ ದೂರು ದಾಖಲಿಸಬಹುದೆಂದು ತಿಳಿಸಿದರು. |
| **ಗ್ರಾಹಕರು- ನ ಅ ಕೃಷ್ಣ, ನಗರಕೆರೆ ಗ್ರಾಮ 9242834721** | | |
| 35 | ನಗರಕೆರೆ ಗ್ರಾಮ ವ್ಯಾಪ್ತಿಯ ಕೆರೆ ಏರಿ ಬಳಿ ಎನ್‌ಜೆವೈ ವಿದ್ಯುತ್ ಲೈನ್ ಹಾದು ಹೋಗಿದ್ದು ಸುಮಾರು ಒಣಗಿದ ಮರಗಳು ಇದ್ದು ಸುಮಾರು ತಿಂಗಳುಗಳಿಂದಲೂ ಹಾಗೇ ಇದ್ದು, ಈಗಲೂ ಇವೆ. ಇದರಿಂದ ವಿದ್ಯುತ್ ಸಮಸ್ಯೆ ಆಗಾಗ್ಗೆ ಬರುತ್ತಿರುತ್ತದೆ. ಈಗ ಹೊಸ ಲೈನ್‌ಮನ್‌ಗಳು ಬಂದಿರುವುದಾಗಿ | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಶಾಖಾಧಿಕಾರಿ/ಕಿರಿಯ ಇಂಜಿನಿಯರ್(ವಿ) ರವರಿಗೆ ಸೂಚಿಸಿ ವಿದ್ಯುತ್ ಲೈನ್ ಹಾದು ಹೋಗಿರುವ ಕೆಲವು ಕಡೆ ಲೈನ್‌ಗೆ ತೊಂದರೆಯಾಗುತ್ತಿರುವ ಗಿಡ/ಮರಗಳನ್ನು ಜರೂರಾಗಿ ತೆಗೆಸುವಂತೆ ಸೂಚಿಸಿದರು. |

| | | |
|---|---|---|
| | ತಿಳಿಸಿದ್ದೀರಿ. ಈಗಲಾದರೂ ಅವುಗಳನ್ನು ತೆಗೆಸಿ ಎಂದು ತಿಳಿಸಿದರು. | |
| | ಗ್ರಾಹಕರು- ನ ಆ ಕೃಷ್ಣ, ನಗರಕೆರೆ ಗ್ರಾಮ 9242834721 | |
| 36 | ಜನಸಂಪರ್ಕ ಸಭೆ ನಡೆಯುವ ಸ್ಥಳ, ದಿನಾಂಕ ಹಾಗೂ ಸಮಯವನ್ನು ಒಂದು ವಾರ ಮುಂಚೆಯೇ ತಿಳಿಸಿದರೆ ಗ್ರಾಹಕರು ಹಲವರಿಗೆ ವಿಚಾರ ತಿಳಿಸಿ ಗ್ರಾಹಕರು ಜನಸಂಪರ್ಕ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಸಹಕರಿಸಲು ತಿಳಿಸುವುದಾಗಿ ತಿಳಿಸಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಪತ್ರಿಕೆಯಲ್ಲಿ ಪ್ರಕಟಿಸುತ್ತಿರುವುದಾಗಿ ತಿಳಿಸಿದರು. ಹಾಗೂ ಮುಂದಿನ ದಿನಗಳಲ್ಲಿ ಭಿತ್ತಿ ಪತ್ರದ ಮೂಲಕ ಸಭೆ ನಡೆಯುವ ಸ್ಥಳ, ದಿನಾಂಕ ಹಾಗೂ ಸಮಯವನ್ನು ತಿಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| | ಗ್ರಾಹಕರು- ನ ಆ ಕೃಷ್ಣ, ನಗರಕೆರೆ ಗ್ರಾಮ 9242834721 | |
| 37 | ಐಪಿ ಸೆಟ್‌ಸಂಖ್ಯೆ ಎಂಐಪಿ 4226 (ತೆರೆದ ಬಾವಿ)ರ ಬಳಿ ಇದ್ದ ಲೈನ್ ಕಳುವಾಗಿದೆ. ದಯವಿಟ್ಟು ಪುನರ್ ಸಂಪರ್ಕ ಕಲ್ಪಿಸಿಕೊಡಿ ಎಂದು ಕೇಳಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಸಂಬಂಧಪಟ್ಟ ಶಾಖಾಧಿಕಾರಿ/ಕಿರಿಯ ಇಂಜಿನಿಯರ್(ವಿ) ರವರಿಗೆ ಸೂಚಿಸಿ ಸ್ಥಳ ಪರಿಶೀಲಿಸಿ, ಸದರಿ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆಯೇ ಎಂಬುದನ್ನು ಪರಿಶೀಲಿಸಿ, ಕಳುವಾಗಿರುವ ಲೈನ್‌ಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ತಯಾರಿಸಿ ಪುನರ್ ಸಂಪರ್ಕ ಕಲ್ಪಿಸಲು ಜರೂರಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು. |
| | ಗ್ರಾಹಕರು- ನ ಆ ಕೃಷ್ಣ, ನಗರಕೆರೆ ಗ್ರಾಮ 9242834721 | |
| 38 | ಪರಿವರ್ತಕ ಸುಟ್ಟು ಹೋದಾಗ ಬೇರೆ ಪರಿವರ್ತಕ ತಂದು ಅಳವಡಿಸಲು ಇರುವ ಕಾಲಾವಕಾಶವೆಷ್ಟು ಎಂದು ಕೇಳಿದರು. | ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಪಟ್ಟಣ ಲಿಮಿಟ್‌ಗೆ ಸಂಬಂಧಿಸಿದಂತೆ 24 ಗಂಟೆ ಹಾಗೂ ಗ್ರಾಮ ಲಿಮಿಟ್‌ಗೆ ಸಂಬಂಧಿಸಿದಂತೆ 72 ಗಂಟೆ ಸಮಯವಿರುತ್ತದೆ ಎಂದು ತಿಳಿಸಿದರು. |

ಈ ಮೇಲಿನ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ, ಅಧೀಕ್ಷ ಇಂಜಿನಿಯರ್(ವಿ) ಮಂಡ್ಯ ರವರು ಮಾತನಾಡಿ ಮುಂದಿನ ಜನ ಸಂಪರ್ಕ ಸಭೆ ನಡೆಯುವ ದಿನಾಂಕ (ಆಗಸ್ಟ್ 21.(ಉಪವಿಭಾಗ-1) ಹಾಗೂ ಆಗಸ್ಟ್-23 (ಉಪವಿಭಾಗ-2) ಗಳನ್ನು ತಿಳಿಸಿದರು. ಮುಂದುವರೆದು ನಿಮ್ಮ ತಾಲ್ಲೂಕು ವ್ಯಾಪ್ತಿಯಲ್ಲಿ ಸುಮಾರು 5.500 (ಐದು ಸಾವಿರದ ಐದುನೂರು) ಐಪಿ ಸೆಟ್‌ಇರುವುದಾಗಿ ತಿಳಿಸಿದರು. ಅಲ್ಲದೇ ಐಪಿ ಸೆಟ್‌ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಂಡಿದ್ದು, ಸ್ಥಾವರಗಳ ಕಂದಾಯ ಬಾಕಿಯನ್ನು ವಸೂಲಾತಿ ಮಾಡಬೇಕಾಗಿರುವುದಲ್ಲದೇ ಆಯಾ ತಿಂಗಳ ಕಂದಾಯವನ್ನು ಆ ತಿಂಗಳೇ ಪಾವತಿಸಿದಲ್ಲಿ ನಿಗಮವು ಸುಸೂತ್ರವಾಗಿ ನಡೆಯುವುದಾಗಿ ತಿಳಿಸಿ ಮುಂದಿನ ಜನ ಸಂಪರ್ಕ ಸಭೆಯ ವೇಳೆಗೆ ನಿಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸುವುದಾಗಿ ತಿಳಿಸಿ ಸಭೆಯನ್ನು ಮಧ್ಯಾಹ್ನ 2.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಸೆಸ್ಕ್, ಗ್ರಾಮಾಂತರ ಉಪ ವಿಭಾಗ, ಮದ್ದೂರು

ಪ್ರತಿಯನ್ನು,

1) ಪ್ರಧಾನ ವ್ಯವಸ್ಥಾಪಕರು, ಚಾವಿಸನಿನಿ, ನಿಗಮ ಕಾರ್ಯಾಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ, ಮೈಸೂರು ವಲಯ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಛೇರಿ, ಮಂಡ್ಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
6) ಲೆಕ್ಕಾಧಿಕಾರಿ(ಆಂಪ), ಸೆಸ್ಕ್, ವಿಭಾಗೀಯ ಕಛೇರಿ, ಮದ್ದೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
7) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮದ್ದೂರು ಉಪವಿಭಾಗ-1 ರವರ ಮಾಹಿತಿಗಾಗಿ ಸಲ್ಲಿಸಿದೆ.
8) ಸಹಾಯಕ ಇಂಜಿನಿಯರ್(ತಾಂ), ಉಪವಿಭಾಗ-1, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,
9) ಸಹಾಯಕ ಇಂಜಿನಿಯರ್(ತಾಂ), ಗ್ರಾಮಾಂತರ ಉಪವಿಭಾಗ, ಮದ್ದೂರು ರವರ ಮುಂದಿನ ಕ್ರಮಕ್ಕಾಗಿ,

ಮು.ಕ